# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 165 (265)

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಉತ್ತರಿಸುವ ದಿನಾಂಕ : 12.08.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೋಲಾರ ಜಿಲ್ಲೆಯ ವೇಮಗಲ್ ಹೋಬಳಿಯಲ್ಲಿ ಖಾಸಗಿ ವಲಯದ ಹೆಲಿಕಾಪ್ಟರ್ ಜೋಡಣಾ ಘಟಕ ಸ್ಥಾಪಿಸುತ್ತಿರುವುದು ನಿಜವೇ; | ಸರ್ಕಾರದ ಆದೇಶ ಸಂಖ್ಯೆ ಸಿಐ 323 ಎಸ್.ಪಿ.ಐ. 2024, ದಿನಾಂಕ 29.10.2024, 02.12.2024 & 18.06.2025 ರಂತೆ ಮೆ:: ಟಾಟ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ ರವರಿಗೆ ಕೋಲಾರ ಜಿಲ್ಲೆ ವೇಮಗಲ್ ಕೈಗಾರಿಕಾ ಪ್ರದೇಶದ ಫೇಸ್-1 ರಲ್ಲಿನ 17 ಎಕರೆ ಕೆಐಎಡಿಬಿ ಭೂಮಿಯಲ್ಲಿ ಒಟ್ಟು ರೂ.500 ಕೋಟಿ ಬಂಡವಾಳ ಹೂಡಿಕೆಯಲ್ಲಿ "Aircraft Manufacturing – Final Assembly Line (FAL) including MRO (Rotary and Fixed Wing Aircraft and cater to platforms using future technologies related to vertical lift such as electric propulsion, unmanned systems etc)" ಉತ್ಪಾದನೆಯ ಯೋಜನೆಯನ್ನು 2025 ರಿಂದ 2033 ರ ಅವಧಿಯಲ್ಲಿ 3 ಹಂತಗಳಲ್ಲಿ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ. |
| ಆ | ಹಾಗಿದ್ದಲ್ಲಿ, ಇದಕ್ಕಾಗಿ ಎಷ್ಟು ಎಕರೆ ಪ್ರದೇಶದ ಜಾಗದ ಅವಶ್ಯಕತೆ ಇದೆ; ಅವಶ್ಯಕತೆ ಇರುವಂತಹ ಜಮೀನನ್ನು ಈಗಾಗಲೇ ಸ್ವಾಧೀನಪಡಿಸಿ ಕೊಳ್ಳಲಾಗಿದೆಯೇ; | |
| ಇ | ಏರ್ಬಸ್-ಟಾಟಾ ಕಂಪನಿ ಜಂಟಿ ಯೋಜನೆ ಘಟಕಕ್ಕೆ ಸರ್ಕಾರದಿಂದ ನೀಡಲಾಗುತ್ತಿರುವ ಸಹಕಾರ ಏನು: ಸಬ್ಸಿಡಿ ದರದಲ್ಲಿ ಭೂಮಿ, ಬಂಡವಾಳ ಹೂಡಿಕೆ ನೆರವು, ನೋಂದಣಿ ಶುಲ್ಕದ ಸೌಲಭ್ಯ, ವಿದ್ಯುತ್ ದರದಲ್ಲಿ ವಿನಾಯಿತಿ ಇವುಗಳನ್ನು ಸರ್ಕಾರ ನೀಡಲು ಒಪ್ಪಿಗೆ ಸೂಚಿಸಿದೆಯೇ; | ಸದರಿ ಬಂಡವಾಳ ಹೂಡಿಕೆಗೆ ಕೈಗಾರಿಕಾ ನೀತಿ 2025-30 ರಡಿ ಲಭ್ಯವಿರುವ ಉತ್ತೇಜನ ಮತ್ತು ಪ್ರೋತ್ಸಾಹಕಗಳನ್ನು ನೀಡಲಾಗುತ್ತದೆ. |
| ಈ | ಈ ಘಟಕ ಪ್ರಾರಂಭಗೊಂಡಲ್ಲಿ ಸ್ಥಳೀಯ ಯುವಕರಿಗೆ ಉದ್ಯೋಗ ನೀಡಲು ಪ್ರಾಮುಖ್ಯತೆ ನೀಡಲಾಗುವುದೇ? | ಕೈಗಾರಿಕಾ ನೀತಿಯಡಿ ಪ್ರೋತ್ಸಾಹಕ ಮತ್ತು ಉತ್ತೇಜನಗಳನ್ನು ಪಡೆಯಲು ಗ್ರೂಪ್-ಡಿ ಸಿಬ್ಬಂದಿ ನೇಮಕಾತಿಯಲ್ಲಿ ಶೇ. 100 ರಷ್ಟು ಮತ್ತು ಒಟ್ಟಾರೆ ಶೇ. 70 ರಷ್ಟು ಉದ್ಯೋಗಾವಕಾಶಗಳನ್ನು ಸ್ಥಳೀಯರಿಗೆ ನೀಡಬೇಕೆಂಬ ಷರತ್ತನ್ನು ವಿಧಿಸಲಾಗಿರುತ್ತದೆ. |

ಕಡತ ಸಂಖ್ಯೆ ಸಿಐ 241 ಎಸ್‌ಪಿಐ 2025

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು